# ಎರಡೂ ಒಂದಾಗದು ರಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 109.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 341.
3. **Note:** The lyrics in both the above references are fully matching and the singer has followed these wordings.

ರಾಗ ಶ್ರೀ ಅಟ ತಾಳ

ಎರಡೂ ಒಂದಾಗದು ರಂಗ || ಪ ||

ಎರಡೂ ಒಂದಾಗದು ಎಂದೆಂದಿಗು ರಂಗ || ಅ ಪ ||

ಒಂದು ವೃಕ್ಷದಲ್ಲಿ ಎರಡು ಪಕ್ಷಿಗಳು
ಒಂದೆ ಗೂಡಿನಲ್ಲಿ ಇರುತಿಹವು
ಒಂದು ಪಕ್ಷಿ ಫಲಗಳನುಂಬುದು ಮ-
ತ್ತೊಂದು ಫಲಂಗಳನುಣ್ಣದು ರಂಗ || 1 ||

ಹಲವು ಕೊಂಬೆಗೆ ಒಂದು ಹಾರಿತು, ಒಂದು
ಹಲವು ಕೊಂಬೆಗೆ ಹಾರಲರಿಯದು
ಹಲವನೆಲ್ಲ ಒಂದು ಬಲ್ಲುದು, ಒಂದು
ಹಲವನೆಲ್ಲ ಅರಿಯದು ರಂಗ || 2 ||

ನೂರೆಂಟು ಕೊಂಬೆಗೆ ಹಾರಿತು ಅದು
ಹಾರಿ ಮೇಲಕ್ಕೇರಿ ಮೀರಿತು
ಮೀರಿ ಪುರಂದರ ವಿಠ್ಠಲ ನಿಮ್ಮನು
ಸೇರಿ ಸುಖಿಯಾಗಿ ನಿಂತಿತು ರಂಗ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಬಿಂಬೋಪಾಸನೆಯಲ್ಲಿ ಬಿಂಬನಾದ ಪರಮಾತ್ಮ, ಪ್ರತಿಬಿಂಬನಾದ ಜೀವಾತ್ಮ ಎಂಬೆರಡು ತತ್ತ್ವಗಳು ಉಪಾಸ್ಯ–ಉಪಾಸಕ ಸಂಬಂಧದಲ್ಲಿ ಸೇರುತ್ತವೆ. ಅವೆರಡೂ ಒಂದೇ ಆಗಿಬಿಡುವುದು ಸಾಧ್ಯವಿಲ್ಲ. ಸಂಸಾರದಲ್ಲಾಗಲಿ ಮುಕ್ತಿಯಲ್ಲಾಗಲಿ ಬಿಂಬವು ಸ್ವತಂತ್ರವಾದುದು, ಪ್ರತಿಬಿಂಬವು ಪರತಂತ್ರವಾದುದು.

**ಒಂದು ವೃಕ್ಷದಲ್ಲಿ...–** 'ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನೇ ವೃಕ್ಷೇ' ಎಂಬ ಶ್ರುತಿ ವಚನದ ಕನ್ನಡ ರೂಪ; ಆದರೆ 'ಒಂದೇ ಗೂಡಿನಲ್ಲಿ' ಎಂಬ ವಿವರ ಮೂಲದಲ್ಲಿಲ್ಲ. ಇಲ್ಲಿ ಬಹುಶಃ 'ಯತ್ರ ವಿಶ್ವಂ ಭವತ್ಯೇಕನೀಡಂ' ಎನ್ನುವ ಬೇರೆ ಶ್ರುತಿಯನ್ನು ಅಳವಡಿಸಿಕೊಂಡಿದ್ದಾರೆ.

**ಒಂದು ಪಕ್ಷಿ...–** 'ತಯೋರನ್ಯಃ ಸ್ವಾದ್ವತ್ತಿ, ಅನಶ್ನನ್ ಅನ್ಯಃ'; ಪರಮಾತ್ಮನು ಸಾಕ್ಷಿಕ ಎನ್ನುವ ಭಾವ.  ಆದರೆ 'ಅಭಿಚಾಕಶೀತಿ' ಎನ್ನುವ ಮೂಲದ ಮಾತನ್ನು ಇಲ್ಲಿ ಬಿಡಲಾಗಿದೆ.

**ಹಲವು ಕೊಂಬೆಗೆ...–** ಇದು ಶ್ರುತಿಯಲ್ಲಿಲ್ಲದ ಒಕ್ಕಣೆ.  ಒಂದು ಪಕ್ಷಿಯು (ಜೀವಾತ್ಮನು) ಹಲವು ಕೊಂಬೆಗಳಿಗೆ ಹಾರಿತೆಂದರೆ ಹಲವು ಜನ್ಮಗಳನ್ನೆತ್ತಿತು, ಕರ್ಮಫಲ ಭೋಗಕ್ಕಾಗಿ, ಮತ್ತೊಂದು (ಪರಮಾತ್ಮನು) ಜನ್ಮಗಳನ್ನು ಪಡೆಯುವುದಿಲ್ಲ.

**ಹಲವನೆಲ್ಲ ಒಂದು ಬಲ್ಲುದು...–** ಪರಮಾತ್ಮನು ಸರ್ವಜ್ಞ, ಜೀವಾತ್ಮನು ಅಲ್ಪಜ್ಞ ಎಂದು ತಾತ್ಪರ್ಯ.

**ನೂರೆಂಟು ಕೊಂಬೆಗೆ ಹಾರಿತು...–** ಯೋಗ ಸಾಧನೆಯಿಂದ ನೂರೆಂಟು ನಾಡಿಗಳಲ್ಲಿ ಸಂಚರಿಸಿ ಜೀವವು ಊರ್ಧ್ವಗಾಮಿಯಾಗಿ ಸಹಸ್ರಾರದಲ್ಲಿ ಹೊಕ್ಕಿತು (ಮೇಲಕ್ಕೇರಿ ಮೀರಿತು). ಅಲ್ಲಿ ಪರಮಾತ್ಮನನ್ನು ಬಿಂಬರೂಪಿಯಾಗಿ ಅನುಭವಿಸಿ ಆನಂದವನ್ನು ಪಡೆಯಿತು.

**Classification:** Mundige
**Ankita:** purandara vittala
**Location:** NA
**Category:** Tatva Jnana, Bimba Roopa

**Sub-Category:** ranga, pakshi, mara, phala, sukha, bimba, pratibimba, jiva, samsara, paramatma,
**Pravachana:** NA
**Explanation:** NA